**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕುಮಟಾ**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ–1149/2009

1 ನೇ ಆರೋಪಿಯ ಹೆಸರುಃ ಮುರಲೀಧರ ಪ್ರಭು
ವಯಸ್ಸುಃ ವರ್ಷ
ವಾಸ್ತವ್ಯಃ . ಹೊಸಹೆರವಟ್ಟಾ, ಕುಮಟಾ
2 ನೇ ಆರೋಪಿಯ ಹೆಸರುಃ ಸತೀಶ ವಿ ಗಾಂವಕರ
ವಯಸ್ಸುಃ ವರ್ಷ
ವಾಸ್ತವ್ಯಃ . ಹೊಸಹೆರವಟ್ಟಾ, ಕುಮಟಾ
3 ನೇ ಆರೋಪಿಯ ಹೆಸರುಃ ಮೋಹನ ವೆಂಕಪ್ಪ ಪಟಗಾರ
ವಯಸ್ಸುಃ ವರ್ಷ
ವಾಸ್ತವ್ಯಃ . ಮದ್ಗುಣಿ, ಕುಮಟಾ
ದಿನಾಂಕ **18.1.2023**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರನ್ವಯ ಆಪಾದನೆ**

1 ನೇ ಆರೋಪಿಯಾದ ನೀವು ಸಹ್ಯಾದ್ರಿ ಕೆಶ್ಯೂ ಪ್ರೊಸೆಸರ್ಸ ಹೊಸಹೆರವಟ್ಟಾ ಕುಮಟಾ ಕಾರ್ಖಾನೆಯ ಅನುಭವದಾರರಿದ್ದು, 2 ನೇ ಆರೋಪಿಯಾದ ನೀವು ವ್ಯವಸ್ಥಾಪಕರಿದ್ದು, 3 ನೇ ಆರೋಪಿಯಾದ ನೀವು ಸದರಿ ಕಾರ್ಖಾನೆಯ ದುರಸ್ತಿ ಕೆಲಸದ ಗುತ್ತಿಗೆದಾರರದ್ದು, ದಿನಾಂಕ 19.9.2009 ರಂದು ಬೆಳಿಗ್ಗೆ 9.30 ಘಂಟೆಯ ಸುಮಾರಿಗೆ 1 ನೇ ಆರೋಪಿಯಾದ ನಿಮ್ಮ ಕಾರ್ಖಾನೆಯ ಗೋಡೆಯ ಹೊರಭಾಗದಲ್ಲಿ ಪ್ಲಾಸ್ಟರಿಂಗ್ ಕೆಲಸವನ್ನು ಮಾಡುತ್ತಿದ್ದಾಗ ಪ್ಲಾಸ್ಟರ ಮಾಡಿದ ಗೋಡೆಗಳಿಗೆ ವೆಂಕಟ್ರಮಣ ಸುಕ್ರು ಪಟಗಾರ ಇವರು ಪ್ಲಾಸ್ಟಿಕ ಬಿಂದಿಗೆಯಲ್ಲಿ ಸುಮಾರು 17 ಅಡಿ ಎತ್ತರದಲ್ಲಿ ನಿಂತು ನೀರು ತೆಗೆದುಕೊಂಡು ಗೋಡೆಗೆ ಹಾಕುತ್ತಿದ್ದಾಗ, ಛಾವಣಿಯ ಶೀಟ್ ಕೆಳಗೆ ಬಿದ್ದು ಅದರ ಹಿಂದೆಯೇ ಬಿಂದಿಗೆ ಸಮೇತ ವೆಂಕಟ್ರಮಣ ಪಟಗಾರ ಇವರು ತಲೆ ಕೆಳಗಾಗಿ ಬಿದ್ದಿದ್ದರಿಂದ ಅವರ ತಲೆಗೆ ತೀವ್ರತರವಾದ ಗಾಯಗಳಾಗಿ ತಕ್ಷಣ ಅವರನ್ನು ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಮೃತರಾಗಿದ್ದು, ಮೃತ ವ್ಯಕ್ತಿಯು ಕಾರ್ಖಾನೆಯ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಕೇವಲ ತಲೆಗೆ ಬಟ್ಟೆ ಟೋಪಿ ಧರಿಸಿದ್ದು ಹೊರತು ಪಡಿಸಿ ಹೆಲ್ಮೆಟ್ ಅಥವಾ ಬೆಲ್ಟ ಧರಿಸಿರಲಿಲ್ಲವೆಂದು, ಆ ಮೂಲಕ ಆರೋಪಿತರಾದ ನೀವು ಕಟ್ಟಡದ ಎತ್ತರದಲ್ಲಿ ಕೆಲಸ ಮಾಡಿಸಲು ಯಾವುದೇ ಪರವಾನಿಗೆ ಪಡೆಯದೇ ಹಾಗೂ ಮೃತರ ರಕ್ಷಣೆಗೆ ಯಾವುದೇ ಹೆಲ್ಮೆಟ್ ಅಥವಾ ಬೆಲ್ಟ ಒದಗಿಸದೇ ಇದ್ದು, ಕರ್ನಾಟಕ ಕಾರ್ಖಾನೆಗಳ ನಿಯಮಗಳು 1969 ರ ನಿಯಮ 79(ಎ)(ಬಿ) ನಿಯಮ 136 ನ್ನು ಉಲ್ಲಂಘಿಸಿ ಕಲಂ 92 ಫ್ಯಾಕ್ಟರೀಸ್ ಆಕ್ಟ 1948 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ.

ಪ್ರಶ್ನೆ ನಂ.1  ಈಗ ನಿಮಗೆ ಓದಿ ಹೇಳಿದ ಅಪಾದನೆಯು ತಿಳಿಯಿತೇ?

1 ನೇ ಆರೋಪಿಯ ಉತ್ತರ -

2 ನೇ ಆರೋಪಿಯ ಉತ್ತರ -

3 ನೇ ಆರೋಪಿಯ ಉತ್ತರ -

ಪ್ರಶ್ನೆ ನಂ.2- ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೆ?

1 ನೇ ಆರೋಪಿಯ ಉತ್ತರ -

2 ನೇ ಆರೋಪಿಯ ಉತ್ತರ -

3 ನೇ ಆರೋಪಿಯ ಉತ್ತರ -

ಮೇಲಿನ ಆಪಾದನೆಯನ್ನು ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿತರಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ  ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.

sd/–

**(ನರೇಂದ್ರ ಬಿ. ಆರ್)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.**

**ಕುಮಟಾ**